MVC No. 1464/2023
PW-1

(ಇಂದು ದಿಃ 08-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು :- ಎದುರುದಾರರ ಪರ ಶ್ರೀ. TVP ವಕೀಲರಿಂದ :-**

ಅಪಘಾತ ಆದಾಗ ನಾನು ಹಂದರಕಿಯಿಂದ ಹಣಮನ ಹಳ್ಳಿಗೆ ಕ್ರುಸರ ಜೀಪನಲ್ಲಿ ಹೊರಟಿದ್ದೇವು. ನಾನು ಚಾಲಕನ ಪಕ್ಕದ ಸೀಟನಲ್ಲಿ ಕುಂತಿದ್ದೆ. ವಾಹನ ಹೋಗುತ್ತಿರುವಾಗ ನನಗೆ ವಾಂತಿ ಬಂತು. ವಾಂತ ಬಂದಾಗ ಜೀಪ ನಿಲ್ಲಿಸುವಂತೆ ನಾನು ಹೇಳಿದೆ ಎಂದರೆ ಸರಿ. ನಾನು ಕುಂತಿದ್ದ ಕಡೆ ಬಾಗಿಲು ಇತ್ತು. ಜೀಪ ನಿಂತ ನಂತರ ಬಾಗಿಲು ತೆಗೆದು ವಾಂತಿ ಮಾಡಬೇಕಿತ್ತು ಎಂದರೆ ಸರಿ. ನಿಂತಿ ಜೀಪನಲ್ಲಿ ನಾನು ಸೀಟ್ ಮೇಲೆ ಕುಳಿತುಕೊಂಡು ಬಗ್ಗಿ ವಾಂತಿ ಮಾಡುತ್ತಿರುವಾಗ ನಿಯಂತ್ರಣ ತಪ್ಪಿ ನಾನಾಗಿಯೇ ಗಾಡಿಯಿಂದ ಬಿದ್ದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಚಾಲಕನಿಗೆ ಗಾಡಿ ನಿಲ್ಲಿಸಲು ಹೇಳಿದಾಗ ಆತ ನಿಲ್ಲಿಸಿ ಮತ್ತೆ ಮುಂದಕ್ಕೆ ಹೊಡೆದ ಕಾರಣ ನಾನು ಕೆಳಗೆ ಬಿದ್ದೆ ಎಂದು ಹೇಳುತ್ತಾರೆ. ನಾನು ಕೆಳಗೆ ಬಲಬದಿಯ ತಲೆ ಮತ್ತು ದೇಹವನ್ನು ನೆಲಕ್ಕೆ ಊರಿ ಬಿದ್ದೆ. ನನ್ನ ತಲೆ ಬಲಭಾಗ ಮತ್ತು ಬಲ ಕುತ್ತಿಗೆಗೆ ಏಟಾಗಿತ್ತು. ಆ ಎರಡು ಏಟುಗಳನ್ನು ಹೊರತು ಪಡಿಸಿ ಬೇರೆ ಕಡೆ ಏಟು ಆಗಿರಲಿಲ್ಲ. ಅಪಘಾತದ ನಂತರ ನಾನು ಯುನೈಟೇಡ ಆಸ್ಪತ್ರೆಯಲ್ಲಿ ಸುಮಾರು 20 ದಿನಗಳ ಕಾಲ ಒಳರೋಗಿಯಾಗಿದ್ದೆ ಮತ್ತು ನನ್ನ ಚಿಕಿತ್ಸೆಗೆ ಸುಮಾರು 8,00,000/- ರೂ. ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗೆ 4,50,000/- ರೂ. ಅವಶ್ಯಕತೆಯಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ Pan Card ಇಲ್ಲ. ನನ್ನ ವಯಸ್ಸು 44 ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಯಸ್ಸನ್ನು ತೋರಿಸಲು ಆಧಾರ ಕಾರ್ಡನ್ನು ಹಾಜರುಪಡಿಸಿದ್ದೇನೆ. ನನ್ನ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 44 ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡಿ ತಿಂಗಳಿಗೆ 30,000/- ರೂ. ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆದಾಯ ಇರುವ ಬಗ್ಗೆ ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಕ್ರುಸರ ಚಾಲಕನ ಬಳಿ ವಾಹನ ಚಾಲನೆ ಮಾಡಲು DL ಇರಲಿಲ್ಲ ಎಂದರೆ ಸರಿಯಲ್ಲ. ವಾಹನಕ್ಕೆ ಸೂಕ್ತ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ.

ನಾನು ವೈದ್ಯಕೀಯ ಬಿಲಗಳನ್ನು ಸುಳ್ಳು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ

ಸರಿಯಲ್ಲ. ವೈದ್ಯರು ನೀಡಿದ ಸಲಾಹ ಚೀಟಿಗಳಿಗೂ ಮತ್ತು ಬಿಲಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಿಮೆ ಕಂಪನಿಯಿಂದ ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಬಿಲಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುವ ವೈದ್ಯರು ನಿರೋ ಸರ್ಜನ ಅಲ್ಲ ಎಂದರೆ ನನಗೆ ಗೊತಿಲ್ಲ. ಇಬ್ಬರು ವೈದ್ಯರಿಂದ ಎರಡು ಅಂಗನ್ಯೂತೆ ಪ್ರಮಾಣ ಪತ್ರಗಳನ್ನು ಏಕೆ ಪಡೆದುಕೊಂಡಿದ್ದೇನೆ ಎಂದರೆ ಒಬ್ಬರು ಮೂಳೆ ತಜ್ಞರು ಇನ್ನೊಬ್ಬರು ಸರ್ಜನ ಬಳಿ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಡಾ|| ಕೋಠಾರಿ ಕಡಿಮೆ ಪ್ರಮಾಣದ ಅಂಗನ್ಯೂನ್ಯತೆ ತೋರಿಸಿದ ಕಾರಣ ಇನ್ನೊಬ್ಬ ವೈದ್ಯರ ಬಳಿ ಹೆಚ್ಚಿನ ಪ್ರಮಾಣದ ಅಂಗನ್ಯೂನ್ಯತೆ ತೋರಿಸಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಇಬ್ಬರೂ ವೈದ್ಯರು ಹೆಚ್ಚಿನ ಪ್ರಮಾಣದ ಅಂಗನ್ಯೂತೆ ತೊರೀಸಿದ್ದಾರೆ ಎಂದರೆ ಸರಿಯಲ್ಲ. ವೈದ್ಯರು ತೋರಿಸಿರುವಷ್ಟು ಪ್ರಮಾಣದ ಅಂಗನ್ಯೂನ್ಯತೆ ನನಗೆ ಉಂಟಾಗಿಲ್ಲ ಎಂದರೆ ಸರಿಯಲ್ಲ.

ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ 2ನೇ ಎದುರುದಾರ ಕಂಪನಿಯರು ಪರಿಹಾರ ನೀಡಲು ಜವಬ್ದಾರರು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು, ಸೇಡಂ**